**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ**

## ಕ್ರಿಮಿನಲ್ ಪ್ರಕರಣ ಸಂಖ್ಯೆ: 839/2020

ಪಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿಗಳು : ಸಚ್ಚಿನ್ ಮತ್ತು ಇತರರು**

**ಚಾಸಾ:01/**ಪ್ರಾಸಾ:01

| | |
|---|---|
| ಹೆಸರು | **ಅಭಿಷೇಕ್** |
| ತಂದೆಯ ಹೆಸರು | **ನಾಗರಾಜು** |
| ವಯಸ್ಸು | **31** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಮರೂರು** |

**ದಿನಾಂಕಃ 15-11-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕಃ 05.03.2017ರಂದು ನಮ್ಮ ಗ್ರಾಮವಾದ ಮರೂರಿನಲ್ಲಿ ಜಾತ್ರೆ ಇರುತ್ತದೆ. ದೇವತಾ ಕಾರ್ಯದ ದಿನ ನಾನು ನನ್ನ ಬೈಕ್ ನಂ.ಕೆಎ-42-ವಿ-6100ಸೆ ಪ್ಲಸ್ ಬೈಕನ್ನು ನನ್ನ ಮಾವ ಕೃಷ್ಣಪ್ಪ ನವರ ಮನೆಯ ಮುಂದೆ ನಿಲ್ಲಿಸಿ ದೇವತಾ ಕಾರ್ಯಕ್ಕೆ ಹೋಗಿರುತ್ತೇನೆ. ಬಂದು ನೋಡಲಾಗಿ ಅಲ್ಲಿ ಬೈಕ್ ಇರುವುದಿಲ್ಲ.ಸುತ್ತಾ ಮುತ್ತಾ ವಿಚಾರಿಸಲಾಗಿ ಬೈಕ್ ಕಳೆದುಹೋಗಿರುತ್ತದೆ ಎಂದು ನಾನು ದಿಃ 06.03.2017ರಂದು ಬೆಳಿಗ್ಗೆ 10.30ಕ್ಕೆ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ದೂರು ಆಗಿದ್ದು, ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ನಿಪಿ-1 ದೂರಿನ ಆದಾರದ ಮೇರೆಗೆ ಪೋಲೀಸರುದಿಃ07.03.2017ರಂದು ಬೈಕ್ ಕಳೆದುಹೋದ ಜಾಗವಾದ

ನನ್ನ ಮಾವನ ಮನೆ ಕೃಷ್ಣಪ್ಪನವರ ಮನೆಯ ಮುಂದೆ ಮಧ್ಯಾಹ್ನ 1.30 ರಿಂದ 2.30 ಗಂಟೆಯ ಸಮಯದಲ್ಲಿ ನನ್ನ, ಚಾಸಾ-6 ಮತ್ತು 7ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ.

ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಮುಂಂದುವರಿದ ಮುಖ್ಯ ವಿಚಾರಣೆಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ.**
**ಮಾಗಡಿ.**